884

ಪಬ್ಲಿಕ್ ವರ್ಕ್ಸ್ ಇಲಾಖೆ ಹಣದ ಪೆಟ್ಟಿಗೆಗಳನ್ನು ಡಿಸ್ಟ್ರಿಕ್ಟ್ ವ ತಾಲ್ಲೂಕು ಖಜಾನೆಗಳಲ್ಲಿ ಹಿಫಾಜತು ಮಾಡುವಣ.

ಸರ್ಕ್ಯುಲರ್ ನಂಬರ್ 1604, ಮಕ್ತುಂ 28ನೇ ಅಕ್ಟೋಬರ್ 1884.

ಕಾಂಪ್ಟ್ರೋಲರ್ ಯವರು ಡಿಸ್ಟ್ರಿಕ್ಟ್ ವ ತಾಲ್ಲೂಕು ಟ್ರೆಜರೀ ಆಫೀಸರುಗಳಿಗೆ ತಿಳಿಸುವದೇನಂದರೆ, ಮೈಸೂರು ಗವರ್ಮೆಂಟಿನ ಸೆಕ್ರಿಟೇರಿಯವರ ಅಪೇಕ್ಷೆಮೇರೆ ಪಬ್ಲಿಕ್ ವರ್ಕ್ಸ್ ಇಲಾಖೆ ಆಫೀಸರುಗಳು ತಮ್ಮ ಸರ್ಕಾರದ ಹಣದ ಪೆಟ್ಟಿಗೆಗಳನ್ನು (ಬೀಗಹಾಕಿ ಮೊಹರ್ ಮಾಡಿ) ಹಿಫಾಜತಿಗೋಸ್ಕರ ಸ್ಥಳಿಕ ತಾಲ್ಲೂಕು ವ ಡಿಸ್ಟ್ರಿಕ್ಟ್ ಖಜಾನೆಗಳಲ್ಲಿ ಮಿಡುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ. ಹೀಗೆ ಯಿಡಲ್ಪಟ್ಟಾಗ ಟ್ರೆಜರಿ ಇನ್‌ಚಾರ್ಜ್ ಆಫೀಸರು, ಇವರೀ ಕಂಡ ನಮೂನೆಯಲ್ಲಿ ಒಂದು ರೇತಿ ಕೊಡತಕ್ಕದ್ದು ; ಸದರೀ ರೇತಿಯು, ಹಣದ ಪೆಟ್ಟಿಗೆ ಪಬ್ಲಿಕ್ ವರ್ಕ್ಸ್ ಆಫೀಸರಿಂದ ಪುನಃ ತರಿಸಿಕೊಳ್ಳಲ್ಪಟ್ಟಾಗ, ವಾಪಸ್ ಮೂಡಲ್ಪಡತಕ್ಕದ್ದು.

ರಿಂದ ಹಿಫಾಜತಿಗೋಸ್ಕರ ಬೀಗಹಾಕಿ ಮೊಹರ್ಮಾಡಲ್ಪಟ್ಟು ಬಂದು ಪೆಟ್ಟಿಗೆಯು ಬಂದಿರುತ್ತೆ.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಅಂಬಕೆ ಇಲಾಖಾ.

ನಂ. 331—188. ತಾರೀಖು 10ನೇ ಅಕ್ಟೋಬರ್ 1884, ವೊಕ್ಕಾಂ ಸಾಲಿಗ್ರಾಮ.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೊಸಬಳಿ ಅಂಚೇ ಆಫೀಸುಗಳು ಸ್ಥಾಪಿಸಲ್ಪಟ್ಟಿರುತವೆ :—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮುಳಬಾಗಲು	ಎಲದೂರು, ನಂಗಲಿ, ತಾಯಲೂರು.
ಕಾನಕಾನಹಳ್ಳಿ	ಸಾತನೂರು.
ಬವರಿಂಗ ಪೇಟೆ	ಸೂಲಿಕುಂಟೆ.
ತಿರುಮಕೂಡ್ಲು ನರಸೀಪುರ	ಪೂರೆಗಾಲ.
ನೆಲಮಂಗಲ	ಗೊಲ್ಲಹಳ್ಳಿ.

ಬಿ. ವಂಗಂಗಯ್ಯ,
ಅಂಚೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇನೇದಾರ ಗುಬ್ಬಿ ಸ್ಥಳದ ಸಂಜೀವಯ್ಯನ ವಿಷಯದಲ್ಲಿ.

ಸ್ರ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 42.

ಹುಕುಂ.

ಮೇಲ್ಕಂಡ ಸಂಜೀವಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರಪಿಸಿಕೊಂಡ ಅರ್ಜಿಯು ಸಬ ಜಡ್ಜ್ರರಾದ ಸಿ. ಜೈಸ್ ಸಾಹೇಬರವರ ರೂಬರೂ ಅರ್ಜೀದಾರನ ಪರವಾಗಿ ಸಮಕ್ಷನುದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೇದಾರರಾದ 1ನೇ ಮದೋಡಪ್ಪನ ಕಡೆ

ಪ್ಲೀಡರ್ ನರಸಿಹ್ಮಾಚಾರ್ರ ಯದುರಾಗಿಯೂ ದರ್ಯಾಫ್ತ್ ಮಾಡಲ್ಪಟ್ಟಿತು. ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ, 2ನೇ ಕೆಂಪನಂಜಪ್ಪ, 3ನೇ ಲಿಂಗಶಟ್ಟಿ.

ಸದರೀ ಸಂಜೀವಯ್ಯನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದೂ ಇದರಿಂದ ತೀರ್ಮಾನಿಸಲ್ಪಟ್ಟಿರುತದೆ. ಈ ಕೋರ್ಟು ಹೆಡ್ ಮುನಪಿಯನ್ನು ಜಾಮೀನು ಕೊಟ್ಟು ಕೂಡ್ಲೆ ಅರ್ಜಿ ದಿವಾಳಿಯಾದವನ ಜಿಂದಿಗಿಗೆ ರಿಸೀವರಾಗಿ ಮೊಕರರ್ರಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಜನೇ ದಿವಾಳಿಯಾದವನ ಜಿಂದಗಿಗೆ ಜವಾಬ್ ಮಾಡತಕ್ಕ ಬಗ್ಯೂ ನಿಗೆವಾನಿ ಮಾಡತಕ್ಕ ಬಗ್ಯೂ ಸಹ ಕೋರ್ಟಿನವರಿಂದ ಮುಂದೆ ಆರಡರ್ ನಿರೀಕ್ಷಣೆಯಿಂದ ಮಂಜೂರ್ರಾಡಬಹುದಾದಂಥಾ ಇಬ್ಬರು ಅಥವಾ ಹೆಚ್ಚು ಸಂಖ್ಯಾಕವಾದ ಲಾಯಖ ಜಾಮೀನು ದಾರರೊಡನೆ ಸಾಕಾದಷ್ಟು ಈಡಿನಿಂದ ಪತ್ರವನ್ನ ಬರದುಕೊಟ್ಟು ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಮತ್ತು ಸದರೀ ರಿಸೀವರನು ತಾನು ನಡಿಸಿದ ಕೆಲಸಗಳ ಪ್ರತಿಫಲಕ್ಕಾಗಿ ದಿವಾಳಿಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಒಕಿ ಹಣದಲ್ಲಿ ದರ ಶೇಕಡಾ— ರೂಪಾಯಿ ಮೇರೆ ಕಮ್ಮಿರ್ಷ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟಿದೆ.

ಸ್ಯ 1884ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ದಿಕ್ಕಿ ದೇಣೇದಾರ ದೇವನಹಳ್ಳಿ ಕಸಬಾದಲ್ಲಿ ಯಿರುವ ಸೈದು ಯಿಮಾಮಿನ ವಿಷಯದಲ್ಲಿ.

ಸ್ಯ 1884ನೇ ಇಸವಿ ದಿವಾಳಿ ಕೇಸ್ ನಂಬರು 84.

ಹುಕುಂ.

ಮೇಲ್ಕಂಡ ಸೈದ್ ಯಿಮಾಮನು ನಿರ್ಬಂಧದಿಂದ ಖುಲಾಸೆ ಆಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ ಜಡ್ಜಿ ಶೆ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸೈದ್ ಯಿಮಾಮನನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ, ಕಲ್ಲಿಕೋಟೆ ಬೈತೂರುನಲ್ಲಿ ಯಿರುವ ಪೈರ್ಜ ಹುಸೇನ್ ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೈದ್ ಯಿಮಾಮುಸಾಬಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯ್ಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1884ನೇ ಇಸವಿ ಆಗಸ್ಟ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು) ಅಥವಾ ದಾವಾದಾರ) ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲದ ಮೊಬಲಗು.	ಯಾವಾಗ ದೇಣೇ ಉಂಟಾದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಭರ್.
	ಕಲ್ಲಿಕೋಟೆ ಬೈತೂರುನಲ್ಲಿ ಯಿರುವ ಪೈರ್ಜ ಹುಸೇನ್ ಸಾಬಿ.	450—0—0	1883	ಬೈತೂರು ಮುನಿಸಿಫ್ ಕೋರ್ಟು 1883ನೇ ಇಸವಿ ಅಪ್ರಿಜಿನಲ್ 180ನೇ ನಂಬರ್ ಡಿಕ್ರಿ ಬಾಬತ್ತು.	